ಕರ್ನಾಟಕ ಸರ್ಕಾರ
Government of karnataka
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in
ಡಿಎಸ್ಇಆರ್‌ಟಿ DSERT
Phone - 080 26980100
Fax - 080 26422377

ಸಂಖ್ಯೆ :OB–05/ಪ್ರಿಂಟರ್ ಕಾರ್ಟ್ರಿಡ್ಜ್ ರೀಫಿಲ್ಲಿಂಗ್/03/2020–21 ದಿನಾಂಕ:01/02/2022

## ದರಪಟ್ಟಿ ಆಹ್ವಾನಿಸಿ ಪ್ರಕಟಣೆ

ವಿಷಯ : ಈ ಕಛೇರಿಯಲ್ಲಿ ಉಪಯೋಗಿಸುತ್ತಿರುವ ಗಣಕ ಪ್ರಿಂಟರ್‌ಗಳ ಕಾರ್ಟ್ರಿಡ್ಜ್ ರೀಫಿಲ್ಲಿಂಗ್ ಮತ್ತು ಹೊಸ ಪ್ರಿಂಟರ್‌ಗಳ ಕಾರ್ಟ್ರಿಡ್ಜ್‌ಗಳನ್ನು ಖರೀದಿಸುವ ಸಂಬಂಧ ದರಪಟ್ಟಿ ಕರೆದಿರುವ ಬಗ್ಗೆ.

=000=

ವಿಷಯಕ್ಕೆ ಸಂಬಂಧಿಸಿದಂತೆ ಡಿ.ಎಸ್.ಇ.ಆರ್.ಟಿ ಕಛೇರಿಯಲ್ಲಿ ಉಪಯೋಗಿಸಲಾಗುತ್ತಿರುವ ಗಣಕ ಪ್ರಿಂಟರ್ ಕಾರ್ಟ್ರಿಡ್ಜ್‌ಗಳ ರೀಫಿಲ್ಲಿಂಗ್‌ಗೆ (ವಾರ್ಷಿಕವಾಗಿ ಅಂದಾಜು 250 ಕಾರ್ಟ್ರಿಡ್ಜ್) ಮತ್ತು ಹೊಸ ಪ್ರಿಂಟರ್‌ಗಳ ಕಾರ್ಟ್ರಿಡ್ಜ್‌ಗಳನ್ನು ಖರೀದಿಸುವ ಸಂಬಂಧ ಒಂದು ವರ್ಷದ ಅವಧಿಗೆ ಅರ್ಹ ಸರಬರಾಜುದಾರರಿಂದ ದರ-ಪಟ್ಟಿ (ಕೊಟೇಶನ್) ಅನ್ನು ಕರೆಯಲಾಗಿದೆ.

ಆಸಕ್ತಿವುಳ್ಳ ಸಂಸ್ಥೆಯವರು ಈ ಕಛೇರಿಯ ಸೂಚನಾ ಫಲಕದಲ್ಲಿ ಹಾಗೂ ಕಛೇರಿಯ Website ನಲ್ಲಿ ಪ್ರಕಟಿಸಲಾದ ಪ್ರಕಟಣೆಯನ್ನು ಪರಿಶೀಲಿಸಿ, ದಿನಾಂಕ: 09/02/2022 ರೊಳಗಾಗಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ ಕಛೇರಿ, #4. 100ಅಡಿ ವರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು–560085 ಇಲ್ಲಿಗೆ ಮುಚ್ಚಿದ ಲಕೋಟೆಯೊಂದಿಗೆ ದರಪಟ್ಟಿಯನ್ನು ನಿಗದಿತ ಅವಧಿಯೊಳಗೆ ಸಲ್ಲಿಸತಕ್ಕದ್ದು. ವಿಳಂಬವಾದ ದರಪಟ್ಟಿ ಸ್ವೀಕೃತಿಗೆ ಈ ಕಛೇರಿ ಜವಾಬ್ದಾರಿಯಾಗಿರುವುದಿಲ್ಲ.
ಲಕೋಟೆಯ ಮೇಲೆ ಕಡ್ಡಾಯವಾಗಿ '**ಪ್ರಿಂಟರ್ ಕಾರ್ಟ್ರಿಡ್ಜ್‌ಗಳ ದರಪಟ್ಟಿ**' ಎಂಬುದಾಗಿ ನಮೂದಿಸಿರತಕ್ಕದ್ದು.

**ನಿಬಂಧನೆಗಳು:**

1) ಕೋಟೇಶನ್‌ಗಳು ಕೆಟಿಪಿಪಿ ನಿಯಮಗಳಿಗೆ ಒಳಪಟ್ಟಂತೆ ಇರತಕ್ಕದ್ದು. ಸರಬರಾಜಿಗೆ ಯಾವುದೇ ಮುಂಗಡ ನೀಡಲಾಗುವುದಿಲ್ಲ.
2) ಸರಬರಾಜುದಾರ ಸಂಸ್ಥೆಯು ಎಲ್ಲಾ ಶಾಸನಬದ್ಧ ನೋಂದಣಿಗಳನ್ನು ಹೊಂದಿರತಕ್ಕದ್ದು.
3) ಕಛೇರಿಯಲ್ಲಿ ಬಳಸಲಾಗತ್ತಿರುವ ಪ್ರಿಂಟರ್‌ಗಳ ಕಾರ್ಟ್ರಿಡ್ಜ್‌ಗಳು 88A, 78A, 77A; 36A & 337 ರೀಫಿಲ್ಲಿಂಗ್‌ಗಾಗಿ ಪ್ರತ್ಯೇಕವಾಗಿ ದರಗಳನ್ನು ನಮೋದಿಸುವುದು.
4) ಕಛೇರಿಗೆ ಅಗತ್ಯವಿರುವ ಹೊಸ ಪ್ರಿಂಟರ್ ಕಾರ್ಟ್ರಿಡ್ಜ್‌ಗಳು 88A, 78A, 77A, 36A, 337, G59 & Toshiba 2309 ಪ್ರತ್ಯೇಕವಾಗಿ ದರಗಳನ್ನು ನಮೋದಿಸುವುದು.
5) ದರಗಳನ್ನು ನಮೂದಿಸುವಾಗ ತಲಾ ಒಂದು ರೀಫಿಲ್ಲಿಂಗ್‌ಗೆ ಮತ್ತು ಹೊಸ ಪ್ರಿಂಟರ್‌ಗಳ ಕಾರ್ಟ್ರಿಡ್ಜ್‌ಗಳಿಗೆ ತಗುಲುವ ದರಗಳನ್ನು ನಮೂದಿಸತಕ್ಕದ್ದು.
6) ದರಗಳು ಒಂದು ವರ್ಷ ಅವಧಿಗೆ ಚಾಲ್ತಿಯಲ್ಲಿರತಕ್ಕದ್ದು.
7) ದರಗಳು ಎಲ್ಲಾ ಶಾಸನಬದ್ಧ ತೆರಿಗೆಗಳನ್ನು ಒಳಗೊಂಡಂತೆ ಇರತಕ್ಕದ್ದು.
8) ಸರಬರಾಜು ಬಿಲ್ಲು ಸ್ವೀಕೃತವಾದ ದಿನಾಂಕದಿಂದ ಕನಿಷ್ಟ 20 ರಿಂದ 30 ದಿನಗಳ ಒಳಗಾಗಿ ಕೆ–2, ಇ–ಪಾವತಿ ಮುಖಾಂತರದಲ್ಲಿ ಪರಿಶೀಲಿಸಿ ನಿಯಮಾನುಸಾರ ಪಾವತಿ ಕ್ರಮಗಳನ್ನು ಕೈಗೊಳ್ಳಲಾಗುವುದು.
9) ದರಪಟ್ಟಿ ಪರಿಶೀಲಿಸಿದ ನಂತರದಲ್ಲಿ ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ನಿರ್ದೇಶಕರದ್ದಾಗಿರುತ್ತದೆ.

1/2/22

ನಿರ್ದೇಶಕರು,
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು
ತರಬೇತಿ ಇಲಾಖೆ
ಬೆಂಗಳೂರು –85